ಶ್ರೀ ಜಿ. ಸಿ. ಮಾಧುಸ್ವಾಮಿ : ಸ್ಪಷ್ಟೀಕರಣ ನೀಡಿರುವುದರಿಂದ ನಾನು ಉಪ ಪ್ರಶ್ನೆ ಕೇಳುವುದಿಲ್ಲ.

ಕರ್ನಾಟಕ ವಿದ್ಯುಚ್ಛಕ್ತಿ ಮಂಡಳಿಗೆ ಬರತಕ್ಕ ಬಾಕಿ

250 (2103)-ಶ್ರೀ ಯು. ಬಿ. ಬಣಕಾರ (ಹಿರೇಕೆರೂರು) : ಮಾನ್ಯ ಇಂಧನ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಗಯವಿಟ್ಟು ಉತ್ತರಿಸುವರೆ

ಅ) ವಿವಿಧ ರೀತಿಯ ಗ್ರಾಹಕದಿಂದ 31-3-97ಕ್ಕೆ ಕರ್ನಾಟಕ ವಿದ್ಯುಚ್ಛಕ್ತಿ ಮಂಡಳಿಗೆ ಬರತಕ್ಕ ಬಾಕಿ ಎಷ್ಟು

ಆ) ಈ ಬಾಕಿ ವಸೂಲಾತಿಗೆ ಸರ್ಕಾರದವರು ಕೈಗೊಂಡಿರುವ ಕ್ರಮಗಳೇನು?

ಶ್ರೀ ಶರಣಬಸಪ್ಪ ದರ್ಶನಾಪುರ್ (ಇಂಧನ ರಾಜ್ಯ ಸಚಿವರು)

ಅ) ವಿವಿಧ ರೀತಿಯ ಗ್ರಾಹಕರುಗಳಿಂದ 31-3-97ಕ್ಕೆ ಕರ್ನಾಟಕ ವಿದ್ಯುಚ್ಛಕ್ತಿ ಮಂಡಳಿಗೆ ಬರತಕ್ಕ ಬಾಕಿ ಮೊತ್ತ ರೂ. 999.39 ಕೋ. ರೂ (ವಿವರಗಳು ಅನುಬಂಧ -1ರಲ್ಲಿ ಲಗತ್ತಿಸಲಾಗಿದೆ).

ಆ) ಬಾಕಿ ವಸೂಲಾತಿಯ ಬಗ್ಗೆ ಕರ್ನಾಟಕ ವಿದ್ಯುಚ್ಛಕ್ತಿ ಮಂಡಳಿಯ ತೀವ್ರವಾಗಿ ಪರಿಗಣಿಸಿ. ವಸೂಲಾತಿ ಮಾಡಲು ಈ ಕೆಳಕಂಡಂತೆ ಕ್ರಮವನ್ನು ತೆಗೆದುಕೊಳ್ಳಲಾಗಿದೆ.

ಅ) ಮಾಸಿಕ ಗುರಿಯನ್ನು ನಿಗಧಿಪಡಿಸಲಾಗಿದೆ ಮತ್ತು ಶಕ್ತಿಪೂರ್ಣವಾಗಿ ಪರಿಶೀಲಿಸುತ್ತಿದೆ.

ಆ) ಈ ಸಂಸ್ಥೆಗಳ ಭಾಗಶಃ ಅನುಧಾನವನ್ನು ಕರ್ನಾಟಕ ವಿದ್ಯುಚ್ಛಕ್ತಿ ಮಂಡಳಿಯ ಬಾಕಿ ಹಣದ ಬಗ್ಗೆ ಹೊಂದಾಣಿಕೆಯನ್ನು ಮಾಡಲು ಸರ್ಕಾರವು ಕ್ರಮತೆಗೆದುಕೊಳ್ಳಲಾಗುತ್ತಿದೆ.

ಇ) ಮೇಲ್ಮನವಿಗಳನ್ನು ಅತಿ ಜಾಗ್ರತೆಯಾಗಿ ಇತ್ಯರ್ಥಪಡಿಸಲು ಕ್ರಮ ತೆಗೆದುಕೊಳ್ಳಲಾಗುತ್ತಿದೆ.

ಈ) ಕೆಳ ಹಂತದ ನ್ಯಾಯಾಲಯಗಳ ಮುಂದಿರುವ ಪ್ರಕರಣಗಳನ್ನು ಬಲವಾಗಿ ನಿಗಾವಹಿಸಲಾಗುತ್ತದೆ.

ಉ) ಅಧಿಕ ಹಣ ಬಾಕಿ ಇರುವ ಬಳಕೆದಾರರಿಗೆ ವಿದ್ಯುತ್ ಕಡತಗೊಳಿಸಲು ನೋಟೀಸ್ ನೀಡಲಾಗಿದೆ.

ANNEXURE - I

DETAILS OF ARREARS DUE TO K. E.B. AS ON 31-3-1997

Sl. No.	Tariff	Details of Consumers as on 31-3-1997	Amount due to KEB
1	2	3	4
1.	LT-1(b)	Non-Commercial Lighting & Fans	63,60,00,336-75
2.	LT-1 (a)	Bhagya Jyothi & Kutir Jyothi Schemes	15,90,58,016-67
3.	LT-2(a) (b)	Non-Commercial Combined Lighting & Heating and un-aided institutions.	22,92,80,387-50
4.	LT-3	Commercial & Non-Industrial Lighting and Fans.	28,24,79,840-70
5.	LT-4(a)1	I. P. Sets (Below 10 HP & 10 HP)	93,24,11,570-84
6.	LT-4(a)2	I. P. Sets (above 10 H.P)	4,18,92,262-72
7.	LT-4 (b)2	Water Supply VPs/TPs/ MPs/TMCs	31,44,66,272-35
8.	LT-4(b) 2	Water Supply CMCs/Corporations/ APMCs	10,28,24,040-61
9.	LT-4(b)3	Water Supply - Residential Layouts	21,11,120-70
10.	LT-4(c)	Private Horticultural Nurseries	27,93,686-90
11.	LT-5	Industrial Heating & Motive Power	47,96,82,396-12

1	2	3	4
12.	LT-6 (a)	Public lighting VPs/TPs/MPs/ TMCs	26,21,83,259-70
13.	LT-6(b)	Public Lighting-Others	9,81,91,226-35
14.	HT.1	Public Water Supply & Sewerage Board	211,02,64,912-70
15.	HT-2(a)	Industrial, Non-Industrial, Non-Comml. with D of 50 KVA & above (100% EOU units)	420,71,04,216-00
16.	HT-2(b)	Commercial	3,91,27,237-55
17.	HT-3(a)	Irrigated Agricultural Farms, Lift Irrigation, and Govt. Horticultural Farms.	3,02,35,046-72
18.	HT-3(b)	Private Horticultural Nurseries and Coffee, Tea Plantations.	18,98-00
19.	HT-4	Rural Electrical Co-operative Societies.	4,35,20,124-03
20.	HT-6	Railway Traction	33,234-00
21.		Amalgamated Company.	1,93,138-47
22.		T.B.H.E. Board	5,330-31
		Total	997,38,76,631-09
		Rs.	99738.766 Lakhs.

ಶ್ರೀ ಯು. ಬಿ. ಬಣಕಾರ : ಮಾನ್ಯ ಅಧ್ಯಕ್ಷರೇ, ಕರ್ನಾಟಕ ವಿದ್ಯುಚ್ಛಕ್ತಿ ಮಂಡಳಿಗೆ ವಿವಿಧ ರೀತಿಯ ಗ್ರಾಹಕರುಗಳಿಂದ 31-3-1997ಕ್ಕೆ ಅನ್ವಯವಾಗುವಂತೆ ಸುಮಾರು ಒಂದು ಸಾವಿರ ಕೋಟಿ ರೂ.ಗಳ ವರೆಗೆ ಬಾಕಿ ಹಣವು ಬರಬೇಕಾಗಿದೆ. ಈ ಬಾಕಿಯನ್ನು ವಸೂಲು ಮಾಡುವ ಕುರಿತು ಕೆಇಬಿ ಯವರು ಯಾವುದೇ ತೀವ್ರತರವಾದ ಕಾರ್ಯಕ್ರಮವನ್ನು ತೆಗೆದುಕೊಂಡಿಲ್ಲ ಎಂಬುದನ್ನು ಇವರು ಕೊಟ್ಟ ಉತ್ತರದಿಂದ ನಾವು ಕಾಣಬಹುದಾಗಿದೆ. ಆದರೆ ಕೆಇಬಿಯವರಿಗೆ ಬಾಕಿ ಹಣ ವಸೂಲಾತಿ ವಿಚಾರದಲ್ಲಿ ಕೇವಲ ರೈತರನ್ನು ಮಾತ್ರ ಗುರಿ ಇಟ್ಟುಕೊಂಡಿದ್ದಾರೆ. ಒಂದು ಉದಾಹರಣೆಯನ್ನು ಹೇಳುವುದಾದರೆ ಕೆಇಬಿಯ ಚೇರ್‌ಮನ್‌ರವರು ವಿದ್ಯುಚ್ಛಕ್ತಿ ಮಂಡಳಿಯ ಇಂಜನೀಯರುಗಳ ಸಂಘದ 34ನೇ ಸರ್ವಸದಸ್ಯರ ಮಹಾ ಅಧಿವೇಶನವನ್ನು ಉದ್ಘಾಟನೆ ಮಾಡುತ್ತಾ ಕೃಷಿನೀರಾವರಿ ಪಂಪುಸೆಟ್‌ಗಳ ಬಾಕಿಯನ್ನು ವಸೂಲು ಮಾಡದಿದ್ದರೆ ಅದಕ್ಕೆ ಸಂಬಂಧಪಟ್ಟ ಅಧಿಕಾರಿಗಳನ್ನು ಹೊಣೆಗಾರರನ್ನಾಗಿ ಮಾಡಲಾಗುವುದು ಎಂದು ಹೇಳಿದ್ದಾರೆ. ಕೇವಲ ಒಂದು ನೂರು ಕೋಟಿ ರೂ. ಗಳ ವರೆಗೆ ಮಾತ್ರ ಬಾಕಿ ಇರುವ ರೈತರುಗಳನ್ನು ಕುರಿತು ಇವರು ಎಚ್ಚರಿಕೆ ಕೊಡುತ್ತಾ ಇದ್ದಾರೆ. 900 ಕೋಟಿಗಿಂತಲೂಜಾಸ್ತಿ ಬಾಕಿ ಇರುವವರ ಬಗ್ಗೆ ಏನೂ ಹೇಳಲಿಲ್ಲ. ಇದರಲ್ಲಿ 420 ಕೋಟಿಗಳು ಇಂಡಸ್ಟ್ರೀಗಳವರಿಂದ ಬಾಕಿ ಇರಬೇಕಾಗಿದೆ. ಅದನ್ನು ತಾವುಗಳು ಹೇಗೆ ವಸೂಲು ಮಾಡುತ್ತೀರಿ? ವಿಎಸ್‌ಐಎಲ್‌ನವರಿಂದ 100 ಕೋಟಿಗಳು, ಕುದುರೆಮುಖ ಕಬ್ಬಿಣ ಅದಿರು ಕಾರ್ಖಾನೆಯವರಿಂದ 100 ಕೋಟಿಗಳು ಸಂಡೂರ್ ಮ್ಯಾಂಗನೀಸ್‌ರವರಿಂದ 47 ಕೋಟಿಗಳು ಮುಂತಾಗಿ ಭಾರಿ ಬಾಕಿ ಇರುವಾಗ, ಅತೀ ದೊಡ್ಡ ದೊಡ್ಡ ಕಾರ್ಖಾನೆಗಳವರಿಂದ ಬಾಕಿ ವಸೂಲು ಮಾಡುವುದನ್ನು ಬಿಟ್ಟು ವಿದ್ಯುತ್‌ಪಂಪ್‌ಸೆಟ್‌ಗಳ ಬಳಕೆದಾರರಾದ ರೈತರುಗಳ ಮೇಲೆ ತೀವ್ರತರವಾದ ಹಣ ವಸೂಲಾತಿ ಮಾಡುವ ಕ್ರಮವನ್ನು ಕೆಇಬಿಯವರು ಹಾಕಿಕೊಂಡಿದ್ದಾರೆ. ಹೀಗೆ ಉಳಿದ ಕಡೆಗಳಿಂದ ಬರಬೇಕಾದ ದೊಡ್ಡ ಮೊತ್ತದ ಹಣವನ್ನು ವಸೂಲು ಮಾಡಲು ಸರಕಾರದವರು ಯಾವುದಾದರೂ ಕ್ರಮವನ್ನು ಹಾಕಿಕೊಂಡಿದ್ದಾರೆಯೇ? ಈ ಕುರಿತಾಗಿ ಯಾವುದಾದರೂ ಗುರಿಯನ್ನು ಹಾಕಿಕೊಂಡಿದ್ದಾರೆಯೇ ಎಂಬುದನ್ನು ತಿಳಿಸಬೇಕಾಗಿ ಕೇಳಿಕೊಳ್ಳುತ್ತೇನೆ.

ಶ್ರೀ ಶರಣಬಸಪ್ಪ ದರ್ಶನಾಪುರ್ (ವಿದ್ಯುಚ್ಛಕ್ತಿ ರಾಜ್ಯ ಸಚಿವರು) : ಮಾನ್ಯ ಅಧ್ಯಕ್ಷರೇ, ವಿವಿಧ ರೀತಿಯ ಗ್ರಾಹಕರುಗಳಿಂದ ನಮಗೆ 999.39 ಕೋಟಿ ರೂ.ಗಳು ಬಾಕಿ ಬರಬೇಕಾಗಿದೆ. ಇದರಲ್ಲಿ ಇಂಡಸ್ಟ್ರೀಗಳವರಿಂದ 420 ಕೋಟಿ ರೂ.ಗಳ ವರೆಗೆ ಬಾಕಿ ಇದೆ. ಮಾನ್ಯ ಸದಸ್ಯರು ನಾವು ಕೇವಲ ಇರಿಗೇಷನ್ ಕ್ಷೇತ್ರದ ರೈತರಿಂದ ಮಾತ್ರ ಬಾಕಿ ವಸೂಲಾತಿ ಮಾಡುತ್ತಾ ಇದ್ದೇವೆ ಎಂದು ಹೇಳಿದ್ದಾರೆ. ಅದು ಶುದ್ಧ ತಪ್ಪು. ನಾವು

ಸಾರಾಸಗಟಾಗಿ ಇಂಡಸ್ಟ್ರೀಸ್, ಎಇಹೆಚ್, ಡೊಮೆಸ್ಟಿಕ್, ಮುಂತಾಗಿಎಲ್ಲಾ ಕಡೆಗಳಿಂದಲೂ ವಸೂಲಾತಿಗೆ ಕ್ರಮ ತೆಗೆದುಕೊಂಡಿದ್ದೇವೆ. ಈಗಾಗಲೆ ಸಬ್‌ಡಿವಿಜನ್‌ಗೆ ಇಷ್ಟು ರೆವಿನ್ಯೂ ಕಲೆಕ್ಟ್ ಮಾಡಬೇಕೆಂದು ನಿಗದಿ ಮಾಡಿದ್ದೇವೆ. ಈಗಾಗಲೇ ಸಬ್‌ಡಿವಿಜನ್‌ಗೆ ಇಷ್ಟು ರೆವಿನ್ಯೂ ಕಲೆಕ್ಟ್ ಮಾಡಬೇಕೆಂದು ನಿಗದಿ ಮಾಡಿದ್ದೇವೆ. ಸರಕಾರದವರು ಬೇರೆ ಬೇರೆ ಸಂಸ್ಥೆಗಳಿಗೆ ಏನು ಗ್ರಾ್ಯಂಟ್ ಕೊಡುತ್ತಾ ಇದ್ದಾರೆ, ಆ ಬಗ್ಗೆ ಸರಕಾರದವರು ಕೂಡ ಮುಂದೆ ಒಂದು ಆದು ವಿಲೇಜ್‌ಪಂಚಾಯತ್ ಆಗಲಿ, ತಾಲ್ಲೂಕು, ಜಿಲ್ಲಾ ಪಂಚಾಯತ್ ಆಗಲಿ, ಅವರಿಗೆ ಗ್ರಾ್ಯಂಟ್‌ಸಿಗುತ್ತಿದ್ದು ಅವರಿಂದ ಏನು ಬಾಕಿ ಬರಬೇಕಾಗಿದೆ ಅದನ್ನು ವಸೂಲು ಮಾಡಲು ಕ್ರಮ ಹಾಕಿಕೊಂಡಿದ್ದೇವೆ. ಅದೇ ರೀತಿಯಲ್ಲಿ ಕೋರ್ಟ್‌ನಲ್ಲಿಯೂ ಕೂಡ ಕೇಸ್‌ಗಳು ಕೆಲವು ಇವೆ. ಅದಕ್ಕೆ ಸುಮಾರು 200 ಕೋಟಿ ರೂ.ಗಳ ವೆಚ್ಚದಲ್ಲಿ ನಾವು ಕೋರ್ಟ್ ಕೇಸ್‌ಗಳನ್ನು ರೆಗ್ಯೂಲರ್ ಆಗಿ ಅಟೆಂಡ್ ಮಾಡುತ್ತಾ ಇದ್ದೇವೆ. ಅಪೀಲ್ ಕೇಸ್‌ಗಳಲ್ಲಿ ಸುಮಾರು 120 ಕೋಟಿ ರೂ.ಗಳು ಬಾಕಿ ಇವೆ. ಈ ವಿಷಯದಲ್ಲಿಯೂ ಕೂಡ ಯಾರು ಅಪೀಲ್‌ಮಾಡಿರುತ್ತಾರೋ ಅದನ್ನು ಫಾಸ್ಟ್ ಆಗಿ ಸಾಕಷ್ಟು ಪ್ರಮಾಣದಲ್ಲಿ ಪೂರ್ಣಗೊಳಿಸಿ ಇಲಾಖೆಗೆ ಬರತಕ್ಕಂಥ ಹಣವನ್ನು ತುಂಬುವ ಬಗ್ಗೆ ಕೆಲಸ ಮಾಡುತ್ತಾ ಇದ್ದೇವೆ. ಈ ಕೆಲಸದಲ್ಲಿ ಜಿಲ್ಲಾ ಪಂಚಾಯತ್‌ನವರನ್ನು, ಜಿಲ್ಲಾ ಸಚಿವರನ್ನು ಕೂಡ ಇನ್‌ವಾಲ್ವ್ ಮಾಡಿದ್ದೇವೆ. ಇದರಿಂದಾಗಿ 7-8 ತಿಂಗಳುಗಳಿಂದ ಇದ್ದ ಬಾಕಿಯನ್ನು ವಸೂಲು ಮಾಡಲು ಸಾಕಷ್ಟು ಒತ್ತು ಕೊಡುತ್ತಾ ಇದ್ದೇವೆ. ಮಾನ್ಯ ಸದಸ್ಯರು ಹೇಳುವ ಹಾಗೆ ರೈತರುಗಳಿಂದ ಬಾಕಿ ಬರಬೇಕಾಗಿದ್ದ 90 ಕೋಟಿ ರೂ.ಗಳಿಗೆ ಮಾತ್ರ ಒತ್ತುಕೊಡುತ್ತಾ ಇದ್ದೇವೆಂದು ಹೇಳುವುದು ಶುದ್ಧ ತಪ್ಪು. ನಾವು ಇರಿಗೇಷನ್, ಇಂಡಸ್ಟ್ರೀಸ್, ಎಇಹೆಚ್, ಮುಂತಾಗಿ ಎಲ್ಲಾ ಕಡೆಗಳಿಂದಲೂ ಬಾಕಿ ವಸೂಲು ಮಾಡಲು ಕ್ರಮ ತೆಗೆದುಕೊಳ್ಳುತ್ತಾ ಇದ್ದೇವೆ. ಹೀಗೆ ಬಾಕಿ ವಸೂಲು ಮಾಡಲು ಸೂಕ್ತ ಕ್ರಮವನ್ನು ತೆಗೆದುಕೊಂಡಿದ್ದುಆದರ ಮೂಲಕ ಸಾಕಷ್ಟು ಬಾಕಿ ವಸೂಲು ಆಗಿದೆಎಂದು ಹೇಳಬಯಸುತ್ತೇನೆ.

ಶ್ರೀ ಯು. ಬಿ. ಬಣಕಾರ್ : ಮಾನ್ಯ ಸಚಿವರು ಕೇವಲ ರೈತರಿಂದ ವಸೂಲು ಮಾಡುವಲ್ಲಿ ಒತ್ತು ಕೊಟ್ಟಿಲ್ಲ ಎಂದು ಹೇಳಿರುವುದು ತಪ್ಪು. ಪತ್ರಿಕೆಯಲ್ಲಿ ಪ್ರಕಟಗೊಂಡ ಸುದ್ದಿಯಂತೆ ಕೆಇಬಿ ಚೇರ್ಮನ್‌ರವರು ಇಂಜಿನೀಯರುಗಳ ಸಂಘದ ಉದ್ಘಾಟನೆಯನ್ನುಮಾಡುವಾಗ ರೈತರ ಪಂಪುಸೆಟ್ಟುಗಳ ಬಾಕಿವಸೂಲು ಮಾಡುವ ಬಗ್ಗೆ ಮಾತ್ರ ಹೇಳಿದ್ದಾರೆ. ಏತನೀರಾವರಿಗಳಿಗೆ ಸರಕಾರದವರು ಕೊಡ ಬೇಕಾದ ಬಾಕಿ ಇದ್ದ ಬಗ್ಗೆ ವಿದ್ಯುತ್‌ಸಂಪರ್ಕವನ್ನು ನಿಲ್ಲಿಸಿದ್ದಾರೆ. ಆದ್ದರಿಂದ ಕೂಡಲೇ ಏತನೀರಾವರಿ ಯೋಜನೆಗಳಿಗೆ ವಿದ್ಯುತ್ ಸಂಪರ್ಕವನ್ನು ಕಲ್ಪಿಸಿಕೊಡುವ ಬಗ್ಗೆ ಮಾನ್ಯಸಚಿವರು ಆದೇಶವನ್ನು ನೀಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಹೆಚ್. ಎನ್. ನಂಜೇಗೌಡ : ಮಾನ್ಯ ಅಧ್ಯಕ್ಷರೇ, ಹೋದ ಸೆಪ್ಟಂಬರ್ ತಿಂಗಳಲ್ಲಿ ಒಂದು ಪಬ್ಲಿಕ್ ಇಂಟ್ರೆಸ್ಟ್ ಲಿಟಿಗೇಷನ್ ಬಂತು. ಕೆಇಬಿಯವರು ಮೇಲೆ ಹಾಕಿದ ಈ ಪಬ್ಲಿಕ್‌ಲಿಟಿಗೇಷನ್ ಕೇಸ್‌ನ್ನು ನಮ್ಮ ಮಾನ್ಯ ಸದಸ್ಯರಾದ ಸುರೇಶ್‌ಕುಮಾರ್‌ರವರು ಹಾಕಿದ್ದರು. ಆ ಸಂದರ್ಭದಲ್ಲಿ ಬಾಕಿ ಇರುವ ಹಣವನ್ನು ಬರುವ ಸೆಪ್ಟಂಬರ್ ಒಳಗಾಗಿ ವಸೂಲು ಮಾಡುತ್ತೇವೆ ಎಂದು ಸರಕಾರದವರು ಅಂಡರ್‌ಟೇಕಿಂಗ್ ಕೊಟ್ಟಿದ್ದರು. ಹಾಗೆ ಬರೆದುಕೊಟ್ಟ ಹಾಗೆ ನೀವು ಏನು ಕ್ರಮವನ್ನು ತೆಗೆದುಕೊಂಡಿದ್ದೀರಿ? ಹೀಗೆ ಹೈಕೋರ್ಟ್ ನಿರ್ದೇಶನವನ್ನು ಕೊಟ್ಟು ಮೇಲೆ ನೀವು ಎಷ್ಟು ಹಣವನ್ನು ವಸೂಲು ಮಾಡಿದ್ದೀರಿ? ಮಾಡದಿದ್ದರೆ ಕಾರಣ ಏನು? ವಸೂಲು ಆಗದಿದ್ದರೆ ಸೆಪ್ಟೆಂಬರ್ 1997 ಆದಮೇಲೆ ಕಂಟಿಂಪ್ಟ್ ಹಾಕುವುದೇ ಇದಕ್ಕೆ ಸರಕಾರದವರೇ ಒಂದು ಸಲಹೆ ಕೊಡಿ.

ಶ್ರೀ ಶರಣಬಸಪ್ಪ ದರ್ಶನಾಪುರ್ : ಮಾನ್ಯ ಅಧ್ಯಕ್ಷರೇ ನಾವು ವರ್ಷೇ ವರ್ಷೇ ಬಾಕಿಯನ್ನು ವಸೂಲು ಮಾಡುತ್ತಾ ಇದ್ದೇವೆ. ಆದರೆ ಮತ್ತೆ ಅದುಅಕ್ಯುಮಲೇಟ್ ಆಗುತ್ತಾ ಇದೆ. ಕೋರ್ಟಿನತೀರ್ಮಾನ ಕೊಡುವ ತನಕ ನಾವು ಈ ಬಾಕಿ ವಸೂಲು ಮಾಡಿಲ್ಲ. ಕುದುರೆಮುಖ ಕಬ್ಬಿಣ ಅದಿರು ಕಾರ್ಖಾನೆಯವರಿಂದ ನಮಗೆ 135 ಕೋಟಿ ಬಾಕಿಬರಬೇಕಾಗಿತ್ತು.

ಅಧ್ಯಕ್ಷರು : ಮಾನ್ಯ ಹಿರಿಯ ಸದಸ್ಯರಾದ ನಂಜೇಗೌಡರು ಏನು ಹೇಳಿದ್ದಾರೆ ಅಂದರೆ, ನೀವು ಪಬ್ಲಿಕ್‌ಲಿಟಿಗೇಷನ್‌ಗೆ ಉತ್ತರ ಕೊಡತಕ್ಕಂಥ ಸನ್ನಿವೇಶದಲ್ಲಿ ಸರಕಾರದ ಪರವಾಗಿ ನೀವು ಮನವಿ ಮಾಡಿದ್ದೀರಿ. ಅದರಂತೆ ಸೆಪ್ಟೆಂಬರ್ ತಿಂಗಳೊಳಗಾಗಿ ನೀವು ಬಾಕಿ ಹಣವನ್ನು ವಸೂಲು ಮಾಡುತ್ತೇವೆ ಎಂದು ಹೇಳಿದ್ದೀರಿ. ಈ ರೀತಿಯಾಗಿ ನೀವು ಮುಚ್ಚಳಿಕೆಯನ್ನು ಬರೆದುಕೊಟ್ಟಿದ್ದರೆ, ಆ ಬಗ್ಗೆ ಏನು ಪ್ರಯತ್ನವನ್ನು ಮಾಡಿದ್ದೀರಿ? ಎಷ್ಟು ವಸೂಲು ಮಾಡಿದ್ದೀರಿ? ಈ ರೀತಿಯಾಗಿವಸೂಲಾತಿಯು ಆಗಿದ್ದರೆ ನಿಮಗೆ ನ್ಯಾಯಾಲಯ ನಿಂದನೆ ಆರೋಪವು ಬರುತ್ತದೆ, ಕಂಟಿಂಪ್ಟ್ ಆಫ್ ಪ್ರೊಸೀಡಿಂಗ್ಸ್ ಇನಿಷಿಯೇಟ್ ಆಗುತ್ತದೆ. ಅದಕ್ಕೆ ನೀವು ತಯಾರಾಗಿದ್ದೀರೋ ಎಂಬುದನ್ನು ಅವರು ಕೇಳುತ್ತಾ ಇದ್ದಾರೆ.

ಶ್ರೀ ಜೆ. ಹೆಚ್. ಪಟೇಲ್ : ಮಾನ್ಯ ನಂಜೇಗೌಡರು ಹೇಳಿದ ಹಾಗೆ ಸೆಪ್ಟೆಂಬರ್ - 97 ರೊಳಗೆ ವಸೂಲು ಮಾಡುತ್ತೇವೆಂದು ಹೇಳಿದ್ದೇವೆಯೋ?

ಶ್ರೀ ಹೆಚ್. ಎನ್. ನಂಜೇಗೌಡ : 1996ರ ಸೆಪ್ಟಂಬರ್‌ನಲ್ಲಿ ಈ ಕೇಸ್ ಬಂತು. 1997ರ ಸೆಪ್ಟೆಂಬರ್ ಒಳಗಾಗಿ ಬಾಕಿ ಇಲ್ಲದ ಹಾಗೆ ವಸೂಲು ಮಾಡುತ್ತೇವೆಂದು ಮುಚ್ಚಳಿಕೆ ಬರೆದುಕೊಟ್ಟಿದ್ದೀರಿ.

ಶ್ರೀ ಜೆ. ಹೆಚ್. ಪಟೇಲ್ : ಯಾವುದೇ ಸರಕಾರ ಈ ಡೇಟ್‌ನೊಳಗಾಗಿ ಎಲ್ಲಾ ಬಾಕಿ ವಸೂಲು ಮಾಡುತ್ತೇವೆಂದು ಹೇಳಲು ಆಗುತ್ತದೆಯೇ?

ಶ್ರೀ ಎಸ್. ಸುರೇಶ್‌ಕುಮಾರ್ : ಮಾನ್ಯ ಅಧ್ಯಕ್ಷರೇ, ನಾನು ಆ ಕೋರ್ಟ್‌ನ ಆರ್ಡರ್‌ನ್ನು ಇವೊತ್ತು ತಂದಿಲ್ಲ. ಅದನ್ನು ತಮಗೆ ತಂದು ಕೊಡುತ್ತೇನೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ವಿಧಾನಸೌಧವನ್ನು ಕೂಡ ರೆಗ್ಯೂಲರೈಸ್ ಮಾಡಿಕೊಡುತ್ತೇವೆ ಎಂದು ಡೇಟ್ ಅಫಿಡವಿಟ್ ಮಾಡಿ ಕೊಡಬೇಡಿ.

ಶ್ರೀ ಬಿ. ಎಸ್. ಯಡಿಯೂರಪ್ಪ : ನ್ಯಾಯಾಲಯದಲ್ಲಿ ಸ್ಟೇ ಇರುವುದು 85-90 ಕೋಟಿರೂ.ಗಳು ಎಂದು ಹೇಳುತ್ತೀರಿ. ತಾವುಗಳು ದಾಖಲೆಯನ್ನು ತೆಗೆದು ನೋಡಿ ಸರಿಯಾದ ಉತ್ತರವನ್ನು ಕೊಡಿ. ನನಗೆ ಒಂದು ಲಿಖಿತ ಉತ್ತರವನ್ನು ಕೊಟ್ಟಿದ್ದೀರಿ. ಅದರಲ್ಲಿ ಕೋರ್ಟ್‌ನಲ್ಲಿ ಸ್ಟೇ ಇರುವುದು 53 ಕೋಟಿ 92 ಲಕ್ಷ ಎಂದು ಹೇಳಿದ್ದೀರಿ. ಸುಮ್ಮನೆ ವೇಗ್ ಆಗಿ 80-90 ಕೋಟಿ ಕೋರ್ಟಿನಲ್ಲಿ ಸ್ಟೇ ಇದೆ ವಸೂಲು ಮಾಡಲು ಆಗುವುದಿಲ್ಲ ಎಂಟು ಹೇಳುವುದು ಸರಿಯಲ್ಲ. ಅಲ್ಲಿ ಹೋಗಿ ಅಂಡರ್‌ಟೇಕಿಂಗ್ ಕೊಟ್ಟು ಬಂದು, ಏನು ಕ್ರಮಕೈಗೊಂಡಿದ್ದೀರಿ?

ಶ್ರೀ ಜೆ. ಹೆಚ್. ಪಟೇಲ್ : ಸಭಾಧ್ಯಕ್ಷರೇ, We have only undertaken before the Court that we will make serious efforts to collect all these dues. ಮಾನ್ಯ ಬಣಕಾರ್‌ರವರು ಹೇಳಿದ ಹಾಗೆ ಬರೀ ನಾವು ರೈತರನ್ನು ಮಾತ್ರ ನೋಡುತ್ತಿದ್ದೇವೆಂದು ಅಲ್ಲ. ಇಲ್ಲಿ ಹೆಚ್ಚು ಡ್ಯೂನ್ ಅನ್ನು ಕಲೆಕ್ಟ್ ಮಾಡುವುದಕ್ಕೆ ಸಾಧ್ಯವಾಗುವುದು, ಕನೆಕ್ಷನ್ ಡಿಸ್‌ಕನಕ್ಟ್ ಮಾಡಿ ಅವರನ್ನು ಹೆದರಿಸುವುದಕ್ಕೆ ಸಾಧ್ಯವಾಗುವುದುಕೈಗಾರಿಕೆಗಳಿಗೆ ಮಾತ್ರ. ನೀವು ಸಹಕಾರ ನಮಗೆ ಮಾಡಿ ಎಂದುರೈತರನ್ನು ಕೇಳುತ್ತಿದ್ದೇವೆ. ಕೈಗಾರಿಕೆಗಳು ಎಂದರೆ ಬಹಳ ದೊಡ್ಡ ಕೈಗಾರಿಕೆಗಳಲ್ಲಿ ಕೆಲವು ಕೋರ್ಟಿನಲ್ಲಿ ಲಿಟಿಗೇಷನ್ ಇರುವುದರಿಂದ ನಮಗೆ ತೊಂದರೆಯಾಗಿದೆ. ಸಣ್ಣ ಸಣ್ಣ ಕೈಗಾರಿಕೆಗಳವರ್ಯಾರು ಬಾಕಿ ಇಟ್ಟುಕೊಳ್ಳುವುದಿಲ್ಲ. ಇದ್ದರೂ ನಾವು ಡಿಸ್‌ಕನಕ್ಟ್ ಮಾಡಿದ ತಕ್ಷಣ ಎಲ್ಲಾ ಹಣಕಟ್ಟಿ ಕನೆಕ್ಷನ್ ತೆಗೆದುಕೊಳ್ಳುತ್ತಾರೆ. ಆ ಕಾರಣದಿಂದಾಗಿ ಯಾವುದು ದೊಡ್ಡ ಕೈಗಾರಿಕೆಗಳವರು ಕೋರ್ಟಿಗೆ ಹೋಗಿ ಸ್ಟೇ ಆರ್ಡರ್ ತಂದಿದ್ದಾರೆ ಅದರ ಬಗ್ಗೆ ವಿಚಾರ ಮಾಡಬೇಕಾಗಿದೆ. ಮಾನ್ಯ ಸಚಿವರು ಹೇಳಿದ ಹಾಗೆ ಕುದುರೆಮುಖ ಕಾರ್ಖಾನೆ ಇದೆ. ಇದರ ಬಗ್ಗೆ ಕೇಂದ್ರ ಸರಕಾರದ ಸ್ಟೀಲ್ ಮಂತ್ರಿಗಳೇ ನನ್ನ ಹತ್ತಿರ ಮಾತನಾಡಿ ಆದಷ್ಟೂ ನಾವು ಕಟ್ಟುತ್ತೇವೆ ಎಂದು ಹೇಳಿದ್ದಾರೆ. ನಾವು ವಸೂಲಿ ಮಾಡುತ್ತೇವೆ. ಅದು ಲಾಭದಲ್ಲಿ ಇದೆ.

ಶ್ರೀ ಬಿ. ಎಸ್. ಯಡಿಯೂರಪ್ಪ : ಮಾನ್ಯ ಬಣಕಾರ್‌ರವರು ಮಾತನಾಡಬೇಕಾದರೆ ಒಂದು ವಿಚಾರವನ್ನು ತಮ್ಮ ಗಮನಕ್ಕೆ ತಂದರು. ಕೆ.ಇ.ಬಿ. ಚೇರ್ಮನ್‌ರವರುಭಾಷಣ ಮಾಡಿದಂತಹ ಸಂದರ್ಭದಲ್ಲಿ ಮೂರು ತಿಂಗಳೊಳಗಾಗಿ ರೈತರಿಂದ ಹಣವನ್ನು ವಸೂಲು ಮಾಡದಿದ್ದರೆ ಅಧಿಕಾರಿಗಳನ್ನು ಸಸ್ಪೆನ್‌ಷನ್‌ನಲ್ಲಿ ಇಡುತ್ತೇನೆಂದು ಹೇಳಿರುವುದು ಮುಖಪುಟದಲ್ಲಿ ಬಂದಿದೆ. ನಿಮಗೆ ದಾಖಲೆಯನ್ನು ಈಗಾಗಲೇ ಕಳುಹಿಸುತ್ತೇನೆ. 67.76 ಲಕ್ಷ ರೂಪಾಯಿ ಬಾಕಿ ರೈತರಿಂದ ಬರಬೇಕು. ಪಂಪ್‌ಸೆಟ್‌ಗಳನ್ನು ಹಾಕಿಕೊಂಡು ನೀವೇ ಇಲ್ಲದೇ ಉಪಯೋಗಮಾಡಿಕೊಳ್ಳದೇ ಇರುವಂತಹ ರೈತರಿಂದ ಹಣ ವಸೂಲು ಮಾಡುವುದು ಸರಿಯಲ್ಲ. ಹೊಳೆ, ಬಾವಿಯಲ್ಲಿ ನೀರು ಇಲ್ಲದೆ ಆ ಪಂಪ್‌ಸೆಟ್ ಅನ್ನು ಉಪಯೋಗ ಮಾಡಿಕೊಳ್ಳದೆ ಹಾಳಾಗಿದ್ದಾನೆ. ದಯಮಾಡಿ ಹಣವನ್ನು ವಸೂಲು ಮಾಡುವುದಕ್ಕೆ ಅವನನ್ನು ಒತ್ತಾಯ ಮಾಡದೇ ಅವನಿಗೆ ನೇಣುಹಾಕದೆ ಈ 67 ಕೋಟಿ ಹಣವನ್ನು ರದ್ದು ಮಾಡಿ. ದೊಡ್ಡ ದೊಡ್ಡ ಕೈಗಾರಿಕೆಗಳವರು 999 ಕೋಟಿ ಹಣ ಕೊಡಬೇಕಾಗಿದೆ ಎಂದು ನೀವೇ ಅಂಕಿ ಅಂಶ ಕೊಟ್ಟಿದ್ದೀರಿ. ಅವರನ್ನು ಸುಲಿಗೆ ಮಾಡಿ ಅವರ ಕಾರ್ಖಾನೆಗೆ ಬೀಗ ಹಾಕಿ ನಮ್ಮದೇನೂ ಅಭ್ಯಂತರ ಇಲ್ಲ ದಯಮಾಡಿ ರೈತರನ್ನು ಉಳಿಸುವಂತಹ ಪ್ರಯತ್ನ ಮಾಡಿ ಇದನ್ನು ಪರಿಶೀಲನೆ ಮಾಡಿ. 67 ಕೋಟಿ ರೈತರಿಂದ ಬಾಕಿ ಬರಬೇಕಾಗಿದೆ. ಅವರನ್ನು ಉಳಿಸುವಂತಹ ಪ್ರಯತ್ನ ತಾವು ಮಾಡುತ್ತೀರಾ?

ಶ್ರೀ ಜೆ. ಹೆಚ್. ಪಟೇಲ್ : ರಾಜ್ಯ ಯಡಿಯೂರಪ್ಪನವರಿಗೆ ರೈತರ ಬಗ್ಗೆ ಎಷ್ಟು ಕಳಕಳಿ ಇದೆಯೋ ನಮಗೆ ಕೂಡ ಅದಕ್ಕಿಂತ ಕಡಿಮೆ ಕಳಕಳಿ ಏನೂ ಇಲ್ಲ. ಯಾರು ನೀರನ್ನು ಉಪಯೋಗ ಮಾಡಿಲ್ಲ ಅಂತಹವರಿಗೆ ಎಲೆಕ್ಟ್ರಿಸಿಟಿ ಬಿಲ್ ಕೊಟ್ಟಿದ್ದರೆ...

ಶ್ರೀ ಬಿ. ಎಸ್. ಯಡಿಯೂರಪ್ಪ : ಫ್ರೀ ಇರುವುದಕ್ಕಿಂತ ಮುಂಚೆ.

ಶ್ರೀ ಜೆ. ಹೆಚ್. ಪಟೇಲ್ : ಅದಕ್ಕೆ ನಾನು ಕಳೆದ ಬಾರಿ ಈ ಸದನದಲ್ಲಿ ಹೇಳಿದ್ದೆ. ಅವರಿಂದ ಹಣ ವಸೂಲು ಮಾಡುವುದಕ್ಕೆ ಅಲ್ಲ. ಅವರು ಎಷ್ಟು ವಿದ್ಯುತ್ ಬಳಸಿದ್ದಾರೆಂದು ತಿಳಿದುಕೊಳ್ಳುವುದಕ್ಕಾದರೂ ಮೀಟರ್ ಹಾಕಬೇಕೆಂದು ಹೇಳಿದ್ದೆ. ಆದರೆ ಹಿಂದೆ ಆ ಮೀಟರ್ ಅನ್ನು ತೆಗೆದಂತಹ ಮಹಾ ಶೂರರು ಏನು ಇದ್ದಾರೆ ಅವರು ಕೂಡ ವಿಚಾರ ಮಾಡಬೇಕು. ಮೀಟರ್ ತೆಗೆಸಿಬಿಡಿ ಕಂಬ ತೆಗೆಸಿಬಿಡಿ ನಿಮಗೆ ಅಲ್ಲ ನಾನು ಹೇಳಿದು.

ಶ್ರೀ ವಾಟಾಳ್ ನಾಗರಾಜ್ : ಯಾರಾದರೂ ಕಂಬ ತೆಗೆಸಿ ತಂತಿ ತೆಗೆಸಿ ಎಂದು ಹೇಳಿದ್ದಾರಾ ನೀವು ಈ ರೀತಿ ಉತ್ತರ ಕೊಟ್ಟರೆ ಹೇಗೆ?

ಶ್ರೀ ಜೆ. ಹೆಚ್. ಪಟೇಲ್ : ತಾವೇನು ಸಲಹೆ ಕೊಟ್ಟಿರಿ, ಯಾವ ರೈತನ ಬಾವಿಯಲ್ಲಿ ನೀರು ಇಲ್ಲ ಅವನು ಎಲೆಕ್ಟ್ರಿಸಿಟಿ ಬಳಸದೇ ಇದ್ದರೆ ಅವರಿಗೆ ಬಿಲ್ ಹೇಗೆ ಹೋಗುತ್ತದೆ? ಒಂದು ವೇಳೆ ಆ ರೀತಿ ಹೋಗಿದ್ದರೆ ಅದನ್ನು ಚೆಕ್ ಮಾಡಿಸುತ್ತೇನೆ.

ಶ್ರೀ ಬಿ. ಎಸ್. ಯಡಿಯೂರಪ್ಪ : ಅದೇ 67 ಕೋಟಿ ಬಾಕಿ ಇರುವುದನ್ನು ರದ್ದು ಮಾಡಿಸಿರುವುದಕ್ಕೆ ಪ್ರಯತ್ನ ಮಾಡಿ ಈ ಮಾಹಿತಿಯನ್ನು ತಮಗೆ ಕಳುಹಿಸಿ ಕೊಡುತ್ತೇನೆ.

Mr. Speaker : Alright, we will move on to the next question

ವಿಷಯ : ಅನಧಿಕೃತ ಪಂಪ್‌ಸೆಟ್ ವಿದ್ಯುದ್ದೀಕರಣಗಳನ್ನು ಸಕ್ರಮಗೊಳಿಸುವುದು.

251 (2083)-ಶ್ರೀ ಬಿ. ಶಿವರಾಮು (ಗಂಡಸಿ) : ಮಾನ್ಯ ಇಂಧನ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ

1) ರಾಜ್ಯದಲ್ಲಿ ಇಲ್ಲಿಯವರೆಗೆ ಅನಧಿಕೃತ ಪಂಪ್‌ಸೆಟ್ ವಿದ್ಯುದ್ದೀಕರಣಗಳ ಬಗ್ಗೆ ಸಕ್ರಮಗೊಂಡಿರುವ ಸಂಖ್ಯೆ ಎಷ್ಟು ? ಹಾಗೂ ಸಕ್ರಮಗೊಳ್ಳಲು ಇರುವ ಅನಧಿಕೃತ ಪಂಪ್‌ಸೆಟ್‌ಗಳ ಸಂಖ್ಯೆ ಎಷ್ಟು ?

2) ಅನಧಿಕೃತ ಪಂಪುಸೆಟ್ಟುಗಳನ್ನು ಸಕ್ರಮಗೊಳಿಸಲು ಸರ್ಕಾರವು ಮತ್ತೇನಾದರೂ ಕಾಲಾವಕಾಶ ಕೊಡುತ್ತಿದೆಯೇ ಮತ್ತು ನಿಯಮಾವಳಿಗಳಲ್ಲಿ ಸಡಿಲತೆಯ ಅವಕಾಶಗಳಿವೆಯೇ?

3) ಪ್ರವರ್ಗ ನಾಲ್ಕಕ್ಕೂ ಮತ್ತು ಇತರ ಪ್ರವರ್ಗಗಳಲ್ಲಿ ಬರುವ ಅನಧಿಕೃತ ಪಂಪು ಸೆಟ್ಟುಗಳಿಗೆ ಸರ್ಕಾರಕ್ಕೆ ತಗಲಿರುವ ಮತ್ತು ತಗಲಿದ ವೆಚ್ಚದಲ್ಲಿ ಏನಾದರೂ ವ್ಯತ್ಯಾಸವಿದೆಯಾ? (ವ್ಯತ್ಯಾಸವಿದ್ದರೆ ವೆಚ್ಚ ಹಾಗೂ ಕಾನೂನಿನ ವ್ಯತ್ಯಾಸವನ್ನು ಒದಗಿಸುವುದು)